ಆ ಮತ್ತು ಇ) ಪ್ರಸ್ತುತ ನಿರಾಶ್ರಿತರ ಹೆಸರಿನಲ್ಲಿ ಮೆಸ್ಕಾಂ ನಲ್ಲಿ ನಿರ್ದಿಷ್ಟವಾಗಿ ಅರ್ಜಿ ನೋಂದಣಿಯಾಗಿರುವುದಿಲ್ಲ ನಿರಾಶ್ರಿತರಗಾಗಿಯೇ ವಿದ್ಯುತ್ ಸಂಪರ್ಕಕ್ಕಾಗಿ ವಿಶೇಷ ಯೋಜನೆ ಇರುವುದಿಲ್ಲ ಪುನರ್ವಸತಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಯೋಜನೆಗಳನ್ನು ಕೈಗೊಳ್ಳುವ ಇಲಾಖೆ, ನಿಗಮ ಮತ್ತು ಸಂಸ್ಥೆಗಳು ಒದಗಿಸಬೇಕಾಗಿರುತ್ತದೆ

1447 (1634) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಾಯಾತ್ ಖಾನ್ (ಹುಬ್ಬಳ್ಳಿ) – ಮಾನ್ಯ ಶ್ರೀ ಒಳಾಡಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ಸಾಗಾಟ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಇ) ತಪ್ಪಿತಸ್ಥರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ, (ಜಿಲ್ಲಾವಾರು ವಿವರ ನೀಡುವುದು),

ಈ) ಮಹಿಳೆ ಮಕ್ಕಳ ಸಾಗಾಟ ತಡೆಗೆ ಅನುಷ್ಠಾನದಲ್ಲಿರುವ ಶಾಸನ ಯಾವುದು, ಇಲ್ಲವಾದಲ್ಲಿ ಕಾರಣಗಳೇನು, (ವಿವರ ನೀಡುವುದು)

ಶ್ರೀ ಎಂ ಪಿ ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ಸಚಿವರು)

ಅ) ಬಂದಿದೆ

ಆ) ಇಂತಹ ಪ್ರಕರಣಗಳು ವರದಿಯಾದಲ್ಲಿ ಕೂಡಲೇ ಕಾನೂನು ರೀತ್ಯ ಕ್ರಮ ಜರುಗಿಸಲಾಗುತ್ತಿದೆ ಇಂತಹ ಪ್ರಕರಣಗಳು ಜರುಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಎಲ್ಲಾ ಅಧೀನಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಮಹಿಳಾ ಸಾಂತ್ವನ ಕೇಂದ್ರಗಳಿಂದ ಸಭೆ ನಡೆಸಿ ಮಹಿಳೆಯರಿಗೆ ಇಂತಹ ದುಷ್ಕೃತ್ಯ

ನಡೆಸುವಂತಹವರ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಬೀಟ್ ಸಿಬ್ಬಂದಿಗೆ ಗಸ್ತಿನಲ್ಲಿ ಎಚ್ಚರಿಕೆಯಿಂದ ಗಮನವಿಡುವಂತೆ ಸೂಚಿಸಲಾಗಿದೆ ಗಡಿ ಭಾಗದ ರಾಜ್ಯಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಮೇಲೆ ಈಗಿದ್ದ ಚೆಕ್‌ಪೋಸ್ಟ್‌ಗಳನ್ನು ಬಲಪಡಿಸಿ ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ಕುರಿತು ನಿಗಾ ವಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ

ಇ) ಮೇಲ್ಕಂಡ ಪ್ರಕರಣದಲ್ಲಿ ಆರೋಪಿತರನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಈ) ಮಹಿಳಾ ಮತ್ತು ಮಕ್ಕಳ ಸಾಗಾಟ ತಡೆಗೆ ತಪ್ಪಿತಸ್ಥರ ವಿರುದ್ಧ ಕಲಂ 3, 4, 5, 6, 7 ಮತ್ತು 8 Immoral Traffic Prevention Act (ITP Act) 1956 ಮತ್ತು ಭಾರತೀಯ ದಂಡ ಸಂಹಿತೆಯ ಪ್ರಕಾರ ಕ್ರಮ ಜರುಗಿಸಲಾಗುತ್ತದೆ

ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಮಹಿಳಾ ಸಾಗಾಟದ ಕುರಿತು ದಾಖಲಾದ ಪ್ರಕರಣಗಳ ವಿವರ

ಕ್ರ. ಸಂ	ವರ್ಷವಾರು	ವರದಿಯಾದ ಪ್ರಕರಣಗಳ ಸಂ	ಸಾಗಾಣಿಕೆಗೆ ಒಳಗಾದ ಮಹಿಳೆ ಸಂಖ್ಯೆ	ಷರಾ
1	2005	1	1	ವೇಶ್ಯಾವಾಟಿಕೆಗೆ ಸಲುವಾಗಿ ಪುಣೆಗೆ ಸಾಗಾಣಿಕೆ ಮಾಡಿರುತ್ತಾರೆ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ
2	2006	2	2	ವೇಶ್ಯಾವಾಟಿಕೆಗೆ ಸಲುವಾಗಿ ಮುಂಬೈ ಗೆ ಸಾಗಾಣಿಕೆ ಮಾಡಿರುತ್ತಾರೆ ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ
3	2007 (28–02–2007)	0	0	